# ಕಾರ್ಯಭಾರವೆಂಬ ನೋವಿನ ನೊಗ

**ಮೂವತ್ತೊಂದರ ಬೂಮ್ರಾ ಮತ್ತೊಮ್ಮೆ ಬೆನ್ನುನೋವು ಕಾಡದಿರಲಿ ಎಂದು ಮನದಲ್ಲಿ ಪ್ರಾರ್ಥಿಸುತ್ತಲೇ ಬೌಲಿಂಗ್ ಮಾಡುತ್ತಿದ್ದಾರೆ. 38ರ ವಯಸ್ಸಿನಲ್ಲಿಯೂ ತರುಣರ ತಾಜಾ ಪಾದಗಳ ಕಸುವಿಗೆ ಇನ್ನೊಂದು ಕಡೆ ಜೊಕೊವಿಚ್ ಸವಾಲೊಡ್ಡುತ್ತಿದ್ದಾರೆ. ಈ ಇಬ್ಬರೂ ಅನುಭವಿ ಕ್ರೀಡಾಪಟುಗಳ ಕಾರ್ಯಭಾರ ನಿರ್ವಹಣೆಯಲ್ಲಿ ಚಿಂತಿಸುವ ಪಾಠ ಅಡಗಿದೆ.**




**■ ವಿಶಾಖ ಎನ್.**

ಕಾರ್ಯಭಾರದ ನಿರ್ವಹಣೆ– ಹೀಗೊಂದು ಪದಪುಂಜ ಈಗ ಚಾಲ್ತಿಯಲ್ಲಿದೆ. ಕ್ರಿಕೆಟಿಗ ಜಸ್‌ಪ್ರೀತ್ ಬೂಮ್ರಾ ತಮ್ಮ ಕ್ರಿಕೆಟ್ ಕ್ಯಾಲೆಂಡರ್‌ಗೆ ಸಂಬಂಧಿಸಿದಂತೆ ಇತ್ತೀಚೆಗೆ ಬಳಸಿದ ಪದಪುಂಜವಿದು. ಈಗ ಇಂಗ್ಲೆಂಡ್‌ನಲ್ಲಿ ಐದು ಪಂದ್ಯಗಳ ಕ್ರಿಕೆಟ್‌ಸರಣಿ ನಡೆಯುತ್ತಿದೆಯಷ್ಟೆ. ಆ ಪಂದ್ಯಗಳ ಪೈಕಿ ಮೂರರಲ್ಲಿ ಮಾತ್ರ ತಾವು ಆಡುವುದಾಗಿ ಅವರು ಮೊದಲೇ ಹೇಳಿಬಿಟ್ಟರು. ನಾಯಕತ್ವದ ನೊಗಕ್ಕೆ ಹೆಗಲು ಕೊಡುವುದು ತಮಗೆ ಆಗದು ಎಂದೂ ನಿಷ್ಠುರರಾದರು.

ಅದೇ ಯೋಜನೆಯಂತೆ ಅವರು ಲೀಡ್ಸ್‌ನಲ್ಲಿ ನಡೆದ ಮೊದಲ ಟೆಸ್ಟ್‌ಪಂದ್ಯವನ್ನು ಆಡಿದರು. ಎಜ್‌ಬ್ಯಾಸ್ಟನ್‌ನಲ್ಲಿ ನಡೆದ ಎರಡನೇ ಟೆಸ್ಟ್‌ನಲ್ಲಿ ಬಿಡುವು ಪಡೆದರು. ಲಾರ್ಡ್ಸ್‌ನಲ್ಲಿ ರೋಮಾಂಚಕ ಅಂತ್ಯ ಕಂಡ ಮೂರನೇ ಪಂದ್ಯದಲ್ಲಿ ಬೌಲಿಂಗ್‌ನಲ್ಲಿ ಅಷ್ಟೇ ಅಲ್ಲದೆ ನಾಲ್ಕನೇ ಇನಿಂಗ್ಸ್‌ನ ಬ್ಯಾಟಿಂಗ್‌ನಲ್ಲಿಯೂ ದೀರ್ಘಾವಧಿ ಪ್ರತಿರೋಧ ತೋರಿದರು.

ವಿಶ್ವದ ಕ್ರಿಕೆಟ್ ದಿಗ್ಗಜರೆಲ್ಲ ಇವತ್ತು ಅಗ್ರಮಾನ್ಯ ಬೌಲರ್ ಯಾರು ಎಂಬ ಚರ್ಚೆ ಬಂದಾಗಲೆಲ್ಲ ಎರಡನೇ ಮಾತೇ ಇಲ್ಲದೆ ಬೂಮ್ರಾ ಹೆಸರನ್ನು ಹೇಳುತ್ತಾರೆ. ಎಂಥದ್ದೇ ಪಿಚ್‌ಮೇಲೆ ಸ್ವಿಂಗ್ ಹಾಗೂ ಬೌನ್ಸ್ ಮೂಡಿಸಬಲ್ಲ ಬೂಮ್ರಾ ಚಾಣಾಕ್ಷಣತನವನ್ನು ಬಗೆದೂ ಬಗೆದೂ ನೋಡುತ್ತಾರೆ.

ಭಾರತದ ಅನನ್ಯ ರತ್ನ ಎಂದೇ ವಿರಾಟ್ ಕೊಹ್ಲಿ ಬಣ್ಣಿಸಿರುವ ಬೂಮ್ರಾ ಉಪಸ್ಥಿತಿ ತಂಡಕ್ಕೆ ಹೇಗೆ ವರದಾನವೋ ಹಾಗೆಯೇ ಮಿತಿಯೂ ಆಗಿ ಬದಲಾಗುತ್ತಿರುವುದು ಸ್ಪಷ್ಟವಾಗಿ ಫಲಿತಾಂಶದಲ್ಲಿ ಕಾಣುತ್ತಿದೆ. ಮೊದಲ ಟೆಸ್ಟ್‌ನ ಪ್ರಥಮ ಇನಿಂಗ್ಸ್‌ನಲ್ಲಿಯೇ ಇಂಗ್ಲೆಂಡ್‌ನ ಐವರು ಬ್ಯಾಟ್ಸ್‌ಮನ್‌ಗಳನ್ನು ಬೂಮ್ರಾ ಔಟ್ ಮಾಡಿದರು. ಇದಕ್ಕೆ ಅವರು 24.4 ಓವರ್‌ಗಳನ್ನು ಬೌಲ್ ಮಾಡಬೇಕಾಗಿ ಬಂತು. ಎರಡನೇ ಇನಿಂಗ್ಸ್‌ನಲ್ಲಿ 19 ಓವರ್ ಬೌಲ್ ಮಾಡಿದರಾದರೂ ಒಂದೂ ವಿಕೆಟ್ ಸಿಗಲಿಲ್ಲ. ಇಂಗ್ಲೆಂಡ್ ಬ್ಯಾಟ್ಸ್‌ಮನ್‌ಗಳು ಅವರ ವಿರುದ್ಧ ರಕ್ಷಣಾತ್ಮಕವಾಗಿ ಆಡಿ ವಿಕೆಟ್‌ಗಳನ್ನು ಉಳಿಸಿಕೊಳ್ಳುವ ತಂತ್ರ ಅನುಸರಿಸಿದರು.

ಮೂರನೇ ಟೆಸ್ಟ್‌ಪಂದ್ಯದ ಮೊದಲ ಇನಿಂಗ್ಸ್‌ನಲ್ಲಿಯೂ ಈ ಮಾಂತ್ರಿಕ ಐದು ವಿಕೆಟ್‌ಗಳ ಗೊಂಚಲು ಪಡೆದರು. ಈ ಬಾರಿ 27 ಓವರ್‌ಗಳನ್ನು ಬೌಲ್ ಮಾಡಬೇಕಾಗಿ ಬಂತು. ಎರಡನೇ ಇನಿಂಗ್ಸ್‌ನಲ್ಲಿ 2 ವಿಕೆಟ್‌ಗಳಿಗಾಗಿ 19 ಓವರ್‌ಗಳನ್ನು ಹಾಕಿದ್ದನ್ನೂ ಮರೆಯುವ ಹಾಗಿಲ್ಲ.

ಈಗ ಭಾರತ ತಂಡ ಸಂದಿಗ್ಧ ಸ್ಥಿತಿಯಲ್ಲಿ ಇದೆ. ಸರಣಿಯಲ್ಲಿ 1–2 ರಿಂದ ಹಿಂದೆ ಇರುವ